O.S. 135/2012

ಡಿ. ಡಬ್ಲ್ಯೂ ಃ 1

**<u>ಸಾಕ್ಷಿಗೆ ದಿನಾಂಕ 26.02.2026 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ವಾದಿ ಪರ ಶ್ರೀ ವಕೀಲರಿಂದ</u>**

ರಾಮದಾಸರವರು ನನಗೆ ಚಿಕ್ಕಪ್ಪನಾಗಬೇಕು. ನಮ್ಮ ತಾತನ ಹೆಸರು ಬುಕ್ಕುಚಿಕ್ಕಿ ಹುಚ್ಚಪ್ಪ. ನನ್ನ ತಾತನಿಗೆ ಮೂರು ಜನ ಮಕ್ಕಳು, ಜವರಾಯಪ್ಪ, ರಾಮದಾಸ ಮತ್ತು ಸಣ್ಣಮುಗಮ್ಮ. ಸದರಿರವರನ್ನು ಹೊರತುಪಡಿಸಿ ಬೇರೆ ಮಕ್ಕಳು ಇರುವುದಿಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಯರಿಗೆ ಅರ್ಧ ಭಾಗ ಬರಬೇಕು ಎಂದರೆ ಸರಿ. ವಾದಿಯರಿಗೆ ಭಾಗ ನೀಡಲು ನನಗೆ ಯಾವುದೇ ತಕರಾರು ಇಲ್ಲ. ದಾವಾ ಸ್ವತ್ತುಗಳನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಯಾವುದೇ ಸ್ವತ್ತು ಇಲ್ಲ. ವಾದಿಯರು ಕೋರಿರುವಂತೆ ವಾದಿಯ ದಾವೆಯವನ್ನು ಡಿಕ್ರಿ ಮಾಡಲು ನನಗೆ ಯಾವುದೇ ತಕರಾರು ಇಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ತಂದೆ ಹಾಗೂ ರಾಮದಾಸರವರ ನಡುವೆ ಬರವಣಿಗೆ ಮೂಲಕ ಯಾವುದೇ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ ವಿಭಾಗ ಆಗಿದೆ. ವಿಭಾಗ ಆದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಮೌಖಿಕವಾಗಿ ವಿಭಾಗ ಆಗಿರುತ್ತದೆ ಬರವಣಿಗೆಯಲ್ಲಿ ವಿಭಾಗ ಆಗಿಲ್ಲ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ವಿಭಾಗ ಆಗಿದ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

**ಮರುವಿಚಾರಣೆ ಇರುವುದಿಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ.**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**